# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಕಿಶೋರ್ ಕುಮಾರ್ ಪುತ್ತೂರ್**
**(ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2259**

**ಉತ್ತರಿಸಬೇಕಾದ ದಿನಾಂಕ : 26-03-2026**

**ಉತ್ತರಿಸಬೇಕಾದ ಸಚಿವರು : ಸನ್ಮಾನ್ಯ ಮುಖ್ಯಮಂತ್ರಿ**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸಹಕಾರ ಇಲಾಖೆಯ ಮುಖಾಂತರ 2022-23ನೇ ಸಾಲಿನಿಂದ ಇಲ್ಲಿಯವರೆಗೆ ಅಲ್ಪಾವಧಿ ಬಡ್ಡಿರಹಿತ ಸಾಲದಡಿ ವಿತರಿಸಲಾದ ಒಟ್ಟು ಸಾಲದ ಮೊತ್ತ ಎಷ್ಟು; (ಜಿಲ್ಲಾವಾರು ವಿವರ ನೀಡುವುದು); ಸದರಿ ಸಾಲಗಳ ಮೇಲೆ ಸರ್ಕಾರದಿಂದ ಪಾವತಿಸಬೇಕಾದ ಬಡ್ಡಿ ಸಹಾಯಧನದ ಒಟ್ಟು ಮೊತ್ತ ಎಷ್ಟು; ಅದರಲ್ಲಿ ಇಲ್ಲಿಯವರೆಗೆ ಪಾವತಿಸಿರುವ ಮತ್ತು ಬಾಕಿ ಉಳಿದಿರುವ ಮೊತ್ತ ಎಷ್ಟು; | ಶೂನ್ಯ ಬಡ್ಡಿ ದರದಲ್ಲಿ ಅಲ್ಪಾವಧಿ ಕೃಷಿ ಸಾಲ ನೀಡುವ ಯೋಜನೆಯಡಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳು ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ರೈತ ಸದಸ್ಯರುಗಳಿಗೆ 2022-23, 2023-24, 2024-25 ಮತ್ತು 2025-26ನೇ ಸಾಲಿನ ಡಿಸೆಂಬರ್ ಅಂತ್ಯದವರೆಗೆ ಕ್ರಮವಾಗಿ ರೂ.21,360.56 ಕೋಟಿ, ರೂ.22,753.59 ಕೋಟಿ, ರೂ.23,879.69 ಕೋಟಿ ಮತ್ತು ರೂ.17,836.89 ಕೋಟಿಗಳ ಸಾಲ ವಿತರಿಸಲಾಗಿರುತ್ತದೆ. ಜಿಲ್ಲಾವಾರು ವಿತರಿಸಿರುವ ಸಾಲದ ವಿವರವನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br>ಈ ಯೋಜನೆಯಡಿ ಸಾಲ ವಸೂಲಾತಿ ಆಧಾರವಾಗಿ ಸಹಕಾರ ಸಂಘಗಳ ಮೂಲಕ 2022-23ನೇ ಸಾಲಿನಿಂದ ದಿನಾಂಕ: 28-02-2026 ರವರೆಗೆ ರೂ.6130.20 ಕೋಟಿಗಳ ಬಡ್ಡಿ ಸಹಾಯಧನ ಕ್ಲೇಮು ಬಿಲ್ಲುಗಳು ಸ್ವೀಕೃತವಾಗಿದ್ದು, ರೂ.5035.76 ಕೋಟಿಗಳ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ ಹಾಗೂ ರೂ.1094.44 ಕೋಟಿಗಳು ಬಿಡುಗಡೆಗೆ ಬಾಕಿ ಇರುತ್ತದೆ. |
| ಆ) | ಬಡ್ಡಿ ಸಹಾಯಧನ ಪಾವತಿಯಲ್ಲಿ ಉಂಟಾಗಿರುವ ವಿಳಂಬಕ್ಕೆ ಕಾರಣಗಳೇನು; ಬಾಕಿ ಉಳಿದಿರುವ ಬಡ್ಡಿ ಸಹಾಯಧನವನ್ನು ಬಿಡುಗಡೆ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು; | ಈ ಕೆಳಕಂಡ ಕಾರಣಗಳಿಂದಾಗಿ ಬಡ್ಡಿ ಸಹಾಯಧನ ಪಾವತಿ ವಿಳಂಬವಾಗಿರುತ್ತದೆ.<br>1. ಸರ್ಕಾರ ಈ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಸದಸ್ಯರಿಗೆ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿಯಲ್ಲಿ ಅನುದಾನವನ್ನು ಪ್ರತ್ಯೇಕವಾಗಿ ನಿಗದಿಪಡಿಸುತ್ತಿದ್ದು, ಸಹಕಾರ ಸಂಘಗಳು ಇದಕ್ಕೆ ಅನುಗುಣವಾಗಿ ಈ ವರ್ಗದ ಸದಸ್ಯರಿಗೆ ಸಾಲ ವಿತರಿಸದಿರುವುದರಿಂದ (ಶೇ.12ರಷ್ಟು) ಹಲವು ವರ್ಷಗಳಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿಯಲ್ಲಿ ಆಯವ್ಯಯದಲ್ಲಿ ಮೀಸಲಿಟ್ಟ ಅನುದಾನವನ್ನು ಸರ್ಕಾರಕ್ಕೆ ಅಧ್ಯರ್ಪಣೆ ಮಾಡುತ್ತಿರುವುದರಿಂದ ಕೊರತೆಯಾಗಿರುತ್ತದೆ. |

| | | |
|---|---|---|
| | | 2. ಶೇ.7 ರ ಬಡ್ಡಿ ದರದಲ್ಲಿ ಬೆಳೆ ಸಾಲ ವಿತರಿಸುವ ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ಕೃಷಿ ಮಂತ್ರಾಲಯವು ಸಹಕಾರ ಸಂಘಗಳ ಮೂರು ಹಂತದ ವ್ಯವಸ್ಥೆಯಲ್ಲಿ ಆಡಳಿತ ವೆಚ್ಚ ಹೆಚ್ಚಾಗಿರುವುದನ್ನು ಪರಿಗಣಿಸದೇ ವಾಣಿಜ್ಯ ಬ್ಯಾಂಕುಗಳು ಹಾಗೂ ಸಹಕಾರ ಸಂಘಗಳಿಗೆ ಸಮಾನವಾಗಿ ಬಡ್ಡಿ ಸಬ್‌ವೆನ್‌ಷನ್ ದರವನ್ನು ಶೇ.1.50 ಗೆ ನಿಗದಿಪಡಿಸಿರುತ್ತದೆ. ಕೇಂದ್ರ ಸರ್ಕಾರ ನಿಗದಿತ ಅವಧಿಯೊಳಗೆ ಸಾಲ ಮರುಪಾವತಿಸುವ ರೈತರಿಗೆ ನೀಡುತ್ತಿರುವ ಶೇ.3 ರ ಪ್ರೋತ್ಸಾಹಧನ ದೊಂದಿಗೆ ಸಹಕಾರ ಸಂಘಗಳಿಗೆ ನೆರವಾಗಲು ರಾಜ್ಯ ಸರ್ಕಾರ ಪಾವತಿಸಬೇಕಾದ ಶೇ.4 ರ ಬಡ್ಡಿ ಸಹಾಯಧನದ ಜೊತೆಯಲ್ಲಿ ರಾಜ್ಯ ಸರ್ಕಾರ ಶೇ.2 ರ ಹೆಚ್ಚಿನ ಬಡ್ಡಿ ಪ್ರೋತ್ಸಾಹ ಧನ ದರವನ್ನು ಸಹಕಾರ ಸಂಘಗಳಿಗೆ ನೀಡುತ್ತಿದ್ದು, ಇದರಿಂದ ರಾಜ್ಯ ಸರ್ಕಾರಕ್ಕೆ ಹೆಚ್ಚಿನ ಹೊರೆ ಬೀಳುತ್ತಿದ್ದು, ಪ್ರತೀ ವರ್ಷ ಇಲಾಖೆಯ ಬೇಡಿಕೆಯನ್ವಯ ಆಯವ್ಯಯ ಅವಕಾಶ ಕಲ್ಪಿಸದಿರುವುದು ಬಡ್ಡಿ ಸಹಾಯಧನ ಪಾವತಿ ವಿಳಂಬಕ್ಕೆ ಕಾರಣವಾಗಿರುತ್ತದೆ.<br><br>3. 2023-24ನೇ ಸಾಲಿನಲ್ಲಿ ಪ್ರಕೃತಿ ವಿಕೋಪ ಉಂಟಾದ ಪರಿಣಾಮದಿಂದ ಸಹಕಾರ ಸಂಘಗಳಲ್ಲಿ ದಿನಾಂಕ: 31-12-2023ಕ್ಕೆ ಸುಸ್ತಿಯಾಗಿದ್ದ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲಗಳ ಮೇಲಿನ ಬಡ್ಡಿ ಮನ್ನಾ ಯೋಜನೆ ಜಾರಿಗೆ ತಂದಿದ್ದು, ಈ ಯೋಜನೆಗೆ ಬೆಳೆ ಸಾಲದ ಮೇಲಿನ ಬಡ್ಡಿ ಸಹಾಯಧನ ಯೋಜನೆಗೆ ಮೀಸಲಿಟ್ಟ ಅನುದಾನವನ್ನು ಬಳಕೆ ಮಾಡಿಕೊಂಡಿರುವ ಪ್ರಯುಕ್ತ ವಿಳಂಬವಾಗಿರುತ್ತದೆ.<br><br>2026-27ನೇ ಸಾಲಿಗೆ ಈ ಯೋಜನೆಗೆ ರೂ.1648.00 ಕೋಟಿ ಆಯವ್ಯಯ ಅವಕಾಶ ಕಲ್ಪಿಸಿದ್ದು, ಪೂರ್ಣ ಮೊತ್ತವನ್ನು ಮೊದಲ ಕಂತಿನಲ್ಲಿಯೇ ಒಟ್ಟು ಹಣವನ್ನು ಬಿಡುಗಡೆ ಮಾಡಲು ಸಹಮತಿ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗುವುದು. |
| ಇ) | ಸಹಕಾರಿ ಸಂಘಗಳಿಗೆ ಸರ್ಕಾರದಿಂದ ನೀಡಲಾಗುತ್ತಿರುವ ಇತರೆ ಸೌಲಭ್ಯಗಳು (ಪುನರ್ ಹೂಡಿಕೆ ನೆರವು, ಆಡಳಿತ ವೆಚ್ಚ ಭರ್ತಿ, ಡಿಜಿಟಲೀಕರಣ ಅನುದಾನ, ಸಿಬ್ಬಂದಿ ವೇತನ ಸಹಾಯ, ದುರ್ಬಲ ಸಂಘಗಳ ಪುನಶ್ಚೇತನ ಯೋಜನೆ ಮುಂತಾದವು) | ಸಹಕಾರಿ ಸಂಘಗಳಿಗೆ ಸರ್ಕಾರದಿಂದ ನೀಡಲಾಗುತ್ತಿರುವ ಇತರೆ ಸೌಲಭ್ಯಗಳು ಈ ಕೆಳಕಂಡಂತಿರುತ್ತವೆ.<br><br>**ಕೇಂದ್ರ ಪುರಸ್ಕೃತ ಯೋಜನೆ:**<br><br>ಪ್ರಾಥಮಿಕ ಕೃಷಿ ಪತ್ತಿನ ಸಕಾರ ಸಂಘಗಳು ಹಾಗೂ ಪ್ರಾಥಮಿಕ ಕೃಷಿ ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ ಗಣಕೀಕರಣ ಯೋಜನೆ. |

| | | |
|---|---|---|
| | ಯಾವುವು; ಅವುಗಳಿಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಿದ ಅನುದಾನ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | **ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಯೋಜನೆ:**<br>1. ವಿವಿಧ ವರ್ಗದ ಸಹಕಾರ ಸಂಘಗಳಿಗೆ ಕೌಂಟರ್ ಹಾಗೂ ತಿಜೋರಿ ಕೊಳ್ಳಲು ಸಹಾಯಧನ.<br>2. ಜಿಲ್ಲಾ ಪಂಚಾಯತ್ ಯೋಜನೆಯಡಿಯಲ್ಲಿ ವಿವಿಧ ವರ್ಗದ ಸಹಕಾರ ಸಂಘಗಳಿಗೆ ಗೋದಾಮು ನಿರ್ಮಾಣ ಹಾಗೂ ರಿಪೇರಿಗಾಗಿ ಷೇರು ಬಂಡವಾಳ ಸಹಾಯಧನ.<br>3. ಸಹಕಾರ ಸಂಘಗಳಿಗೆ ಸಹಾಯಧನ (ಎನ್‌ಸಿಡಿಸಿ).<br>4. ಸಹಕಾರ ಸಂಘಗಳಿಗೆ ಷೇರು ಬಂಡವಾಳ.<br>ಈ ಯೋಜನೆಗಳಿಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಿದ ಅನುದಾನದ ಜಿಲ್ಲಾವಾರು ವಿವರವನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |
| ಈ) | ಬಡ್ಡಿ ಸಹಾಯಧನ ಮತ್ತು ಇತರೆ ಅನುದಾನಗಳ ಬಿಡುಗಡೆ ವಿಳಂಬದಿಂದ ಸಹಕಾರಿ ಸಂಘಗಳ ಆರ್ಥಿಕ ಸ್ಥಿತಿ ದುರ್ಬಲಗೊಳ್ಳುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ತಡೆಗಟ್ಟಲು ದೀರ್ಘಕಾಲಿಕ ನೀತಿ ರೂಪಿಸುವ ವಿಚಾರ ಸರ್ಕಾರದ ಪರಿಗಣನೆಯಲ್ಲಿ ಇದೆಯೇ? | ಹೌದು, ಬಡ್ಡಿ ಸಹಾಯಧನ ಬಿಡುಗಡೆ ವಿಳಂಬದಿಂದ ಸಹಕಾರಿ ಸಂಘಗಳ ಆರ್ಥಿಕ ಸ್ಥಿತಿ ದುರ್ಬಲಗೊಳ್ಳುತ್ತಿರುವ ಬಗ್ಗೆ, ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇದನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>1. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳು ಯಾವುದೇ ಬಡ್ಡಿಯನ್ನು ವಸೂಲಾತಿ ಮಾಡದೇ ಸರ್ಕಾರದಿಂದ ಬಿಡುಗಡೆ ಆಗುವ ಬಡ್ಡಿ ಸಹಾಯಧವನ್ನು ಮಾತ್ರ ಜಮಾ ಪಡೆದುಕೊಳ್ಳಲು ಸೂಚಿಸಲಾಗಿದೆ.<br>2. ಸಹಕಾರ ಸಂಘಗಳ ಕಾಯ್ದೆ 1959 ರ ನಿಯಮ 22 (ಎ) ರನ್ವಯ ಸರ್ಕಾರದಿಂದ ಬಿಡುಗಡೆ ಮಾಡಲು ಬಾಕಿ ಇರುವ ಬಡ್ಡಿ ಸಹಾಯಧನವನ್ನು ಆದಾಯ ಖಾತೆಗೆ ತೆಗೆದುಕೊಳ್ಳಲು ಅನುಮತಿ ನೀಡಲಾಗುತ್ತಿದೆ.<br>3. ಸಹಕಾರ ಸಂಘಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರಿಗೆ ಕ್ರಮವಾಗಿ ಶೇ.17.15 ಮತ್ತು ಶೇ.6.95 ರಷ್ಟು ಸಾಲ ವಿತರಿಸಲು ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 30-ಬಿ ರಡಿ ಸರ್ಕಾರದಿಂದ ನಿರ್ದೇಶನ ನೀಡಲಾಗಿದೆ.<br>4. ಕೇಂದ್ರ ಸರ್ಕಾರದ ಶೇ.7 ರ ಬಡ್ಡಿ ದರದಲ್ಲಿ ಬೆಳೆ ಸಾಲ ವಿತರಿಸುವ ಯೋಜನೆಯಡಿಯಲ್ಲಿ ಸಹಕಾರ ಸಂಘಗಳಿಗೆ ನೀಡುತ್ತಿರುವ ಸಬ್‌ವೆನ್‌ಷನ್ ದರವನ್ನು ಹೆಚ್ಚಿಸಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ. |

| | | |
|---|---|---|
| | | 5. 2025-26ನೇ ಸಾಲಿನಲ್ಲಿ ಸ್ವ-ಸಹಾಯ ಗುಂಪುಗಳಿಗೆ ಮೀಸಲಿಟ್ಟ ರೂ.108.26 ಕೋಟಿ ಅನುದಾನ ಉಳಿತಾಯವಾಗಿದ್ದು, ಈ ಅನುದಾನವನ್ನು ಬೆಳೆ ಸಾಲದ ಮೇಲಿನ ಬಡ್ಡಿ ಸಹಾಯಧನ ಯೋಜನೆಗೆ ಬಳಕೆ ಮಾಡಿಕೊಳ್ಳಲು ಸಹಮತಿ ಕೋರಿರುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. |

**ಕಡತ ಸಂಖ್ಯೆ: ಸಿಒ 124 ಸಿಎಲ್ಎಸ್ 2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿ

ಅನುಬಂಧ -1

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)**

**ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2259 ಗೆ ಅನುಬಂಧ-1**

ಶೂನ್ಯ ಬಡ್ಡಿ ದರದಲ್ಲಿ ಅಲ್ಪಾವಧಿ ಕೃಷಿ ಸಾಲ ನೀಡುವ ಯೋಜನೆಯಡಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳು ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ರೈತ ಸದಸ್ಯರುಗಳಿಗೆ ವಿತರಿಸಿದ ಸಾಲದ ವಿವರ (ರೂ.ಕೋಟಿಗಳಲ್ಲಿ)

| ಕ್ರ.ಸಂ | ಜಿಲ್ಲೆ | 2022-23 | 2023-24 | 2024-25 | 2025-26 (ಡಿಸೆಂಬರ್) |
|---|---|---|---|---|---|
| 1 | ಮೈಸೂರು | 704.52 | 833.32 | 917.77 | 955.78 |
| 2 | ಚಾಮರಾಜನಗರ | 231.06 | 267.99 | 315.70 | 328.05 |
| 3 | ಮಂಡ್ಯ | 920 14 | 974.64 | 1035.19 | 673.55 |
| 4 | ಹಾಸನ | 1058.29 | 1077.98 | 1133.71 | 1131.50 |
| 5 | ಚಿಕ್ಕಮಗಳೂರು | 885.33 | 872.59 | 858.24 | 728.93 |
| 6 | ಕೊಡಗು | 618.4 | 730.36 | 830.32 | 804.92 |
| 7 | ದಕ್ಷಿಣ ಕನ್ನಡ | 1522.09 | 1778.75 | 1909.03 | 1584.33 |
| 8 | ಉಡುಪಿ | 516.12 | 622.74 | 638.01 | 487.15 |
| 9 | ಬೆಂ. ನಗರ | 71.18 | 81.04 | 72.76 | 62.42 |
| 10 | ಬೆಂ ಗ್ರಾಮಾಂತರ | 215.08 | 258.58 | 230.16 | 178.21 |
| 11 | ಬೆಂ. ದಕ್ಷಿಣ | 454.12 | 531.98 | 496.13 | 362.46 |
| 12 | ಕೋಲಾರ | 266.73 | 291.34 | 288.17 | 108.08 |
| 13 | ಚಿಕ್ಕಬಳ್ಳಾಪುರ | 338.84 | 364.47 | 336.36 | 146.32 |
| 14 | ತುಮಕೂರು | 691.33 | 705.44 | 701.87 | 398.47 |
| 15 | ಚಿತ್ರದುರ್ಗ | 462.23 | 480.78 | 486.9 | 350.8 |
| 16 | ದಾವಣಗೆರೆ | 794.96 | 795.42 | 850.42 | 478.14 |
| 17 | ಶಿವಮೊಗ್ಗ | 994.61 | 1039.2 | 1106.66 | 557.47 |
| 18 | ಬೆಳಗಾವಿ | 2895.86 | 3060 42 | 3475 66 | 2594.33 |
| 19 | ವಿಜಯಪುರ | 1506.72 | 1675.91 | 1823.68 | |
| 20 | ಬಾಗಲಕೋಟೆ | 1346.46 | 1351.58 | 1375.05 | 941.86 |
| 21 | ಧಾರವಾಡ | 228.57 | 222.52 | 219.54 | 144.36 |
| 22 | ಗದಗ | 193.56 | 191.01 | 186.42 | 131.64 |
| 23 | ಹಾವೇರಿ | 235.17 | 228.12 | 228.00 | 171.34 |
| 24 | ಉತ್ತರ ಕನ್ನಡ | 872 89 | 929.76 | 1009.45 | 1052.80 |
| 25 | ಬೀದರ | 853.05 | 796.34 | 758.05 | 592.79 |

| | | | | | |
|---|---|---|---|---|---|
| 26 | ಕಲಬುರಗಿ | 467.7 | 546.69 | 546.04 | 310.64 |
| 27 | ಯಾದಗಿರ | 164.58 | 184.06 | 183.82 | 82.57 |
| 28 | ರಾಯಚೂರು | 541.53 | 553.85 | 570.34 | 464.91 |
| 29 | ಕೊಪ್ಪಳ | 296.58 | 304.34 | 300.8 | 225.63 |
| 30 | ಬಳ್ಳಾರಿ | 377.61 | 374.35 | 367.96 | 178.5 |
| 31 | ವಿಜಯನಗರ | 635.25 | 628.02 | 627.48 | 375.37 |
| | | 21360.56 | 27753.59 | 23879.69 | 17836.89 |

ಸಹಕಾರ ಸಂಘಗಳ ಅಪರ ನಿಬಂಧಕರು([illegible])

ಅನುಬಂಧ-2

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)

ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2259 ಗೆ ಅನುಬಂಧ-1

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಕಳೆದ ಮೂರು ವರ್ಷಗಳಲ್ಲಿ ಇತರೇ ಯೋಜನೆಗಳಲ್ಲಿ ಬಿಡುಗಡೆಗೆ ಮಾಡಿದ ಅನುದಾನದ ವಿವರ (ರೂ.ಲಕ್ಷಗಳಲ್ಲಿ)

| ಕ್ರ. ಸಂ | ಜಿಲ್ಲೆ | ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕ್ ಪಂಚಾಯತ್ ಯೋಜನೆ | | | ಕೇಂದ್ರ ಪುರಸ್ಕೃತ ಯೋಜನೆ | | |
|---|---|---|---|---|---|---|---|
| | | 2022-23 | 2023-24 | 2024-25 | 2022-23 | 2023-24 | 2024-25 |
| 1 | ಬೆಂಗಳೂರು ನಗರ | 5.00 | 5.00 | 5.00 | | | |
| 2 | ಬೆಂ. ಗ್ರಾಮಾಂತರ | 11.00 | 11.00 | 11.28 | | | |
| 3 | ಬೆಂಗಳೂರು ದಕ್ಷಿಣ | 6.00 | 6.00 | 8.00 | | | |
| 4 | ಚಿಕ್ಕಬಳ್ಳಾಪುರ | 5.00 | 4.69 | 12.00 | | | |
| 5 | ಕೋಲಾರ | 7.50 | 9.00 | 9.24 | | | |
| 6 | ತುಮಕೂರು | 3.00 | 3.00 | 3.00 | | | |
| 7 | ಚಿತ್ರದುರ್ಗ | 4.00 | 3.99 | 4.16 | | | |
| 8 | ದಾವಣಗೆರೆ | 11.34 | 10.71 | 9.22 | | | |
| 9 | ಶಿವಮೊಗ್ಗ | 11.00 | 10.99 | 11.16 | | | |
| 10 | ಬೆಳಗಾವಿ | 0.00 | 0.00 | 0.00 | | | |
| 11 | ವಿಜಯಪೂರ | 7.20 | 10.00 | 10.32 | | | |
| 12 | ಬಾಗಲಕೋಟೆ | 1.00 | 1.25 | 2.31 | | | |
| 13 | ಧಾರವಾಡ | 3.53 | 3.99 | 4.12 | | | |
| 14 | ಗದಗ | 6.30 | 6.38 | 6.51 | | | |
| 15 | ಹಾವೇರಿ | 21.00 | 21.00 | 21.64 | | | |
| 16 | ಉತ್ತರ ಕನ್ನಡ | 4.00 | 5.00 | 5.00 | 0.00 | 6111.80 | 737.32 |
| 17 | ಮಂಡ್ಯ | 33.00 | 35.00 | 35.80 | | | |
| 18 | ಹಾಸನ | 12.00 | 12.99 | 13.28 | | | |
| 19 | ಚಿಕ್ಕಮಗಳೂರು | 0.55 | 0.95 | 1.00 | | | |
| 20 | ಕೊಡಗು | 0.00 | 1.00 | 0.00 | | | |
| 21 | ದಕ್ಷಿಣ ಕನ್ನಡ | 0.00 | 0.00 | 0.00 | | | |
| 22 | ಉಡುಪಿ | 0.00 | 0.00 | 0.00 | | | |
| 23 | ಮೈಸೂರು | 0.00 | 0.00 | 0.00 | | | |
| 24 | ಚಾಮರಾಜನಗರ | 0.00 | 0.00 | 0.00 | | | |
| 25 | ಬೀದರ | 21.30 | 23.30 | 24.02 | | | |
| 26 | ಕಲಬುರಗಿ | 28.99 | 29.60 | 29.44 | | | |
| 27 | ಯಾದಗಿರ | 21.98 | 26.80 | 35.00 | | | |
| 28 | ರಾಯಚೂರು | 10.00 | 12.00 | 12.48 | | | |
| 29 | ಕೊಪ್ಪಳ | 11.53 | 15.13 | 15.91 | | | |
| 30 | ಬಳ್ಳಾರಿ | 5.00 | 6.00 | 6.20 | | | |

| | | | | |
|---|---|---|---|---|
| | [illegible] | 3.00 | 4.00 | 4.12 |
| | ಒಟ್ಟು | **254.22** | **278.77** | **300.21** |

ಸಹಕಾರ ಸಂಘಗಳ ಅಪರ ನಿಬಂಧಕರು(ಪತ್ತು)